# ಗೆರ್ಸಿ ಮಲ್ಲಿಗೆ ವೈಭವ





**ಸೋಲಿಗರ ನುಡಿಯಲ್ಲಿ 'ಗೆರ್ಸಿಮಲ್ಲಿಗೆ' ಎನ್ನಲಾಗುವ ಈ ಪುಷ್ಪ ಸುಂದರಿಯರನ್ನು ಬಿಳಿಗಿರಿರಂಗನ ಬೆಟ್ಟದ ಕೋರ್ ಅರಣ್ಯ ವಲಯದ ಹುಲಿ ಕಾಡಿನಲ್ಲಿ ಕಾಣಬಹುದು.**

■ ಚಿತ್ರ–ಲೇಖನ:
**ನಾ.ಮಂಜುನಾಥಸ್ವಾಮಿ ಗೂಳಿಪುರ**

ಹಳದಿ, ತಿಳಿ ಕೆಂಪು, ಬಿಳಿ ಮಾಸಲು ವರ್ಣ ವೈವಿಧ್ಯ ಹೊಂದಿರುವ ಪುಷ್ಪಲೋಕದ ಕುವರಿ 'ಗೆರ್ಸಿಮಲ್ಲಿಗೆ'. ನೋಡಲು ಥೇಟ್ ಎಕ್ಕದ ಗಿಡವನ್ನೇ ಹೋಲುತ್ತದೆ. ಆದರೆ, ಬಣ್ಣದ ಲೋಲಾಕು ತೊಟ್ಟಂತೆ ಕಂಗೊಳಿಸುವ ಹೂ ಗೊಂಚಲು, ಛತ್ರಿ ಛಾಮರ ನೆಟ್ಟಂತೆ ಕಾಣುವ ಹೂ ಪಕಳೆಗಳು, ಮೈಸೂರು ಮಲ್ಲಿಗೆ ನೆನೆಪಿಸುವ ಮೊಗ್ಗುಗಳು ಮೆರವಣಿಗೆ ಹೊರಟ ಹೂ ಕನ್ಯೆಯರಂತೆ ಮಿನುಗುತ್ತವೆ.

(8ನೇ ಪುಟ ನೋಡಿ)